**ದಿನಾಂಕಃ08.07.2024 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಜಿ.ಜಿ.ಜಿ. ವಕೀಲರಿಂದಃ-**

ನಾನು ನನ್ನ ತಕರಾರು ಪತ್ರದಲ್ಲಿ ನಾನು, ಗುಂಡಪ್ಪ, ಮಹಲಿಂಗಪ್ಪ ಮತ್ತು ತಮ್ಮನಾದ ನಾಗರಾಜ್‌ರವರ ಒಪ್ಪಿಗೆಯ ಮೇರೆಗೆ ಬೇರೆಯವರ ಹತ್ತಿರ ಸಾಲ ಮಾಡಿರುತ್ತೇನೆ ಎಂದು ಬರೆಸಿರುವುದಿಲ್ಲ. 2009 ರಲ್ಲಿ ಕುಟುಂಬಕ್ಕೆ ಹಣದ ಅವಶ್ಯಕತೆ ಇರುತ್ತದೆ ಎಂದು ನನ್ನ ಅಣ್ಣ ಗುಂಡಪ್ಪನ ಬಳಿ ನಾನು ಮತ್ತು ಮಹಲಿಂಗಪ್ಪ ಬೆಂಗಳೂರಿಗೆ ಹೋಗಿರುತ್ತೇವೆ. 1 ನೇ ಪ್ರತಿವಾದಿ ಒಂದು ವಾರದ ನಂತರ ರೂ.50,000/- ಗಳನ್ನು ನೀಡಿರುತ್ತಾರೆ. ಸದರಿ ಹಣವನ್ನು ಅವರು ಫೈನಾನ್ಸ್ ನಲ್ಲಿ ತಂದಿರುತ್ತಾರೆ. ಯಾವ ಫೈನಾನ್ಸ್ ಎಂದು ನನಗೆ ಗೊತ್ತಿಲ್ಲ. ಅದನ್ನು ನಾನು ಇಲ್ಲಿಯವರೆಗೂ ತಿಳಿದುಕೊಂಡಿರುವುದಿಲ್ಲ. 1 ನೇ ಪ್ರತಿವಾದಿ ಫೈನಾನ್ಸ್ ನಲ್ಲಿ ಎಷ್ಟು ಸಾಲ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

1 ನೇ ಪ್ರತಿವಾದಿ ನನಗೆ 2009 ರ ನವೆಂಬರ್ ತಿಂಗಳಲ್ಲಿ ಹಣ ನೀಡಿರುತ್ತಾರೆ. ಹಣವನ್ನು ಬೆಂಗಳೂರಿಗೆ ಹೋಗಿ ತೆಗೆದುಕೊಂಡು ಬಂದಿರುತ್ತೇನೆ. ಮೊದಲಬಾರಿ ಹೋದಾಗ 1 ನೇ ಪ್ರತಿವಾದಿ ಖಾಲಿ ಹಾಳೆಗಳಿಗೆ ನನ್ನ ಮತ್ತು 2 ನೇ ಪ್ರತಿವಾದಿಯ ಸಹಿ ಪಡೆದಿರುತ್ತಾರೆ. 1 ನೇ ಪ್ರತಿವಾದಿ ಪದವಿ ಮುಗಿಸಿ ಸರ್ಕಾರಿ ಕರ್ತವ್ಯದಲ್ಲಿರುತ್ತಾರೆ. 2009 ರಲ್ಲಿ ಕಂದಾಯ ಕಛೇರಿಯಲ್ಲಿ ಕೆಲಸದಲ್ಲಿ ಇದ್ದರು. ಸಾಮಾನ್ಯವಾಗಿ ವಿದ್ಯಾವಂತ ವ್ಯಕ್ತಿ ಖಾಲಿ ಹಾಳೆಯ ಮೇಲೆ ಸಹಿ ಮಾಡುವುದಿಲ್ಲ ಎಂದರೆ ಸಾಕ್ಷಿಯು ಬೇರೆಯವರು ಹೇಳಿದರೆ ಮಾಡುತ್ತಿರಲಿಲ್ಲ ಎಂದು ಹೇಳುತ್ತಾರೆ.

2009 ರಲ್ಲಿ ವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಲು ಮಾತುಕತೆಯಾಗಿದ್ದು ಒಪ್ಪಿ ದಾಖಲೆ ಬರೆದ ನಂತರವೇ ನಾನು, 1 ಮತ್ತು 2 ನೇ ಪ್ರತಿವಾದಿಯರು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಬರವಣಿಗೆ ಮಾಡಿದ ಹಾಳೆಗೆ ಸಹಿ ಮಾಡಿದ್ದರೂ ಸಹ ಖಾಲಿ ಹಾಳೆಗೆ ಸಹಿ ಮಾಡಿರುತ್ತೇನೆ

ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತಹ ಖಾಲಿ ಹಾಳೆಗೆ ಸಹಿ ಮಾಡಿಸಿದ ದಾಖಲೆ ಏನಾಯಿತು ಎಂದು ನಾನು 1 ನೇ ಪ್ರತಿವಾದಿಯ ಬಳಿ ಕೇಳಿರುವುದಿಲ್ಲ.

ಈಗಲೂ ಸಹ ನಾನು, 1 ಮತ್ತು 2 ನೇ ಪ್ರತಿವಾದಿ ಅನ್ಯೋನ್ಯವಾಗಿರುತ್ತೇವೆ. 4 ನೇ ಪ್ರತಿವಾದಿ ನಮ್ಮ ಜೊತೆ ಚೆನ್ನಾಗಿರುವುದಿಲ್ಲ. ನಾನು ಸಲ್ಲಿಸಿದ ತಕರಾರು ಪತ್ರದಲ್ಲಿ ಕುಟುಂಬದಲ್ಲಿ ಆದ ಪಾಲುವಿಭಾಗದ ಬಗ್ಗೆ ಹೇಳಿರುತ್ತೇನೆ. 2015 ರ ಜೂನ್‌ನಲ್ಲಿ ಪಾಲುವಿಭಾಗ ಮಾಡಿಕೊಂಡಿರುತ್ತೇವೆ. ಪಾಲುವಿಭಾಗವನ್ನು ಬೆಂಗಳೂರಿನಲ್ಲಿ 1 ನೇ ಪ್ರತಿವಾದಿಯ ಮನೆಯಲ್ಲಿ ಮಾಡಿಕೊಂಡಿರುತ್ತೇವೆ. ಆ ಸಮಯದಲ್ಲಿ ನಾಗರಾಜ್‌ನನ್ನು ಹೊರತುಪಡಿಸಿ ಬೊಮ್ಮಣ್ಣನ ಎಲ್ಲಾ ಗಂಡು ಮತ್ತು ಹೆಣ್ಣು ಮಕ್ಕಳು ಹಾಜರಿದ್ದೆವು. ಸದರಿ ಪಾಲುವಿಭಾಗದಲ್ಲಿ ಹೆಣ್ಣು ಮಕ್ಕಳಿಗೆ ಭಾಗ ತೋರಿಸಿರುವುದಿಲ್ಲ. ಆದರೆ ಬಾಯಿ ಮಾತಿನಲ್ಲಿ ಏನಾದರೂ ಕೊಡುತ್ತೇವೆ ಎಂದು ಹೇಳಿರುತ್ತೇವೆ.

ಸದರಿ ಪಾಲುವಿಭಾಗ ಪತ್ರ ನೋಂದಣಿ ಆಗಿರುವುದಿಲ್ಲ 4 ನೇ ಪ್ರತಿವಾದಿ ಬಾರದ ಕಾರಣ ನೋಂದಣಿ ಮಾಡಿಸಿರುವುದಿಲ್ಲ. ಸದರಿ ಪಾಲುವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಏಕೆಂದರೆ ಅದು 1 ನೇ ಪ್ರತಿವಾದಿಯ ಬಳಿ ಇರುತ್ತದೆ. 1 ನೇ ಪ್ರತಿವಾದಿಯ ಬಳಿ ಅದನ್ನು ಕೇಳಿದಾಗ ಅವರು ಅದರ ಜೆರಾಕ್ಸ್ ಪ್ರತಿ ನೀಡಿರುತ್ತಾರೆ. 1 ನೇ ಪ್ರತಿವಾದಿಯ ಬಳಿ ಇರುವ ಪಾಲುವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ತಂದು ಹಾಜರುಪಡಿಸಲು ಏನಾದರೂ ತೊಂದರೆ ಇದೆಯಾ ಎಂದರೆ ಸಾಕ್ಷಿಯು ಅದು 1 ನೇ ಪ್ರತಿವಾದಿಯ ಬಳಿ ಈಗ ಇರುವುದಿಲ್ಲ, ಕಳೆದು ಹೋಗಿರುತ್ತದೆ ಎಂದು ಹೇಳುತ್ತಾರೆ. ಪಾಲುವಿಭಾಗವಾಗಿ 25 ದಿನಗಳ ನಂತರದಲ್ಲಿ ಅದು ಕಳೆದು ಹೋಗಿರುತ್ತದೆ ಎಂದು ತಿಳಿಯಿತು.

1 ನೇ ಪ್ರತಿವಾದಿಯ ಬಳಿ ಮೊದಲ ಬಾರಿಗೆ ಪಾಲುವಿಭಾಗ ಪತ್ರ ಕೇಳಿದಾಗಲೇ ಅವರು ಅದರ ಜೆರಾಕ್ಸ್ ಪ್ರತಿಯನ್ನು ನನಗೆ ನೀಡಿರುತ್ತಾರೆ. ನಾನು ಹೇಳುವಂತಹ ಪಾಲುವಿಭಾಗ ಪತ್ರವನ್ನು

ಪ್ರಕರಣಕ್ಕೋಸ್ಕರ ಸೃಷ್ಠಿಸಿರುತ್ತೇನೆ ಎಂದರೆ ಸರಿಯಲ್ಲ. ಪಾಲುವಿಭಾಗ ಪತ್ರದ ಪ್ರಕಾರ ನನಗೆ ಸರ್ವೆ ನಂಬರ್ಃ57/3 ರಲ್ಲಿ ಅಂದಾಜು 4 ಎಕರೆ ಬಂದಿರುತ್ತದೆ. ಸರ್ವೆ ನಂಬರ್ಃ 134 ರಲ್ಲಿ 3 ಎಕರೆ 2 ಗುಂಟೆ ಬಂದಿರುತ್ತದೆ. ಸರ್ವೆ ನಂಬರ್ಃ 57/3 ಹರಿಯಬ್ಬೆ ಗ್ರಾಮದಲ್ಲಿ ಊರ ಪಕ್ಕದಲ್ಲೇ ಇದ್ದು ನೀರಾವರಿ ಜಮೀನಾಗಿರುತ್ತದೆ ಎಂದರೆ ಸರಿ. ಸದರಿ ಜಮೀನಿಗೆ ಹೆಚ್ಚಿನ ಮಾರುಕಟ್ಟೆ ಬೆಲೆ ಇರುತ್ತದೆ ಎಂದರೆ ಸರಿ. ಸರ್ವೆ ನಂಬರ್ಃ134 ಜಮೀನೂ ಸಹ ಹರಿಯಬ್ಬೆ ಗ್ರಾಮದಲ್ಲಿದ್ದು ಅದು ಊರಿನಿಂದ 3 ಕಿ.ಮೀ ದೂರದಲ್ಲಿ ಇರುತ್ತದೆ. ಸದರಿ ಆಸ್ತಿಗೆ 1 ನೇ ಆಸ್ತಿಗಿಂತ ಮಾರುಕಟ್ಟೆ ಬೆಲೆ ಕಡಿಮೆ ಇರುತ್ತದೆ ಎಂದರೆ ಸರಿ.

2 ನೇ ಪ್ರತಿವಾದಿಗೆ ಪಾಲುವಿಭಾಗ ಪತ್ರದಲ್ಲಿ ಸರ್ವೆ ನಂಬರ್ಃ86 ರಲ್ಲಿ 3 ಎಕರೆ ಮತ್ತು ಸರ್ವೆ ನಂಬರ್ಃ134 ರಲ್ಲಿ 3 ಎಕರೆ ಬಂದಿರುತ್ತದೆ. ಈ ವಿಷಯವನ್ನು ತಕರಾರು ಪತ್ರದಲ್ಲಿ ಹೇಳಿರುವುದಿಲ್ಲ 4 ನೇ ಪ್ರತಿವಾದಿಗೆ ಯಾವ ಯಾವ ಆಸ್ತಿಗಳು ಬಂದಿರುತ್ತವೆ ಎಂದು ಈಗ ನನಗೆ ನೆನಪಿಲ್ಲ. 1 ನೇ ಪ್ರತಿವಾದಿಗೆ ಸರ್ವೆ ನಂಬರ್ಃ 50 ರಲ್ಲಿ 4 ಎಕರೆ 20 ಗುಂಟೆ ಜಮೀನು ಬಂದಿರುತ್ತದೆ. ಸರ್ವೆ ನಂಬರ್ಃ86 ರಲ್ಲಿಯೂ ಸಹ ಭಾಗ ಬಂದಿರುತ್ತದೆ.

**ಮುಂದುವರಿದ ಪಾಟೀ-ಸವಾಲಿಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,. ಹಿರಿಯೂರು.